3.9.2001 ರಂದು ನೀಡಿರುವ ಆದೇಶದಂತೆ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್‌ನವರು 2002-03ನೇ ಸಾಲಿಗೆ ವೈದ್ಯಕೀಯ ಮತ್ತು ದಂತ ಸ್ನಾತಕೋತ್ತರ ಪರೀಕ್ಷೆಗೆ ಹಾಜರಾಗಲು ಅರ್ಹತೆಯನ್ನು ಬದಲಾಯಿಸಿದರು. ಈ ವಿಷಯ ಈಗಾಗಲೇ ಪುನರ್ ಪರಿಶೀಲಿಸಲಾಗಿದೆ.

ಆ) ದಿ: 2.7.2002ರಂದು ನಡೆದ ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಈ ಬದಲಾಯಿಸಿದ ಅರ್ಹತೆಯನ್ನು ಪುನರ್ ಪರಿಶೀಲಿಸಲಾಗಿ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. ಹಾಗೂ ಅರ್ಜಿ ಸಲ್ಲಿಸಿದ ಕರ್ನಾಟಕೇತರ ವಿದ್ಯಾರ್ಥಿಗಳ ಅರ್ಜಿ ಶುಲ್ಕವನ್ನು ಹಿಂತಿರುಗಿಸುವುದು ಎಂಬ ನಿರ್ಣಯವನ್ನು ತೆಗೆದುಕೊಂಡಿದೆ. ಈ ವಿಚಾರವನ್ನು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ದಿ: 10.7.2002ರ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಹಾಗೂ ಇದನ್ನು ಎಲ್ಲಾ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಕಳೆದ ಅಧಿವೇಶನದಲ್ಲಿ ಈ ಪ್ರಶ್ನೆ ಕೇಳಿದ್ದೆ ಅವರಿಂದ ಉತ್ತರ ಬಂದಿರಲಿಲ್ಲ. ಈಗ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರು ಒಂದು ಮಾತು ಹೇಳಬೇಕಾಗುತ್ತದೆ. ರಾಜೀವಗಾಂಧಿ ಯೂನಿವರ್ಸಿಟಿಯವರು ಪುನಃ ಅದನ್ನು ಬದಲಾವಣೆ ಮಾಡಿ, ಆ ತಿದ್ದುಪಡಿ ಮಾಡುವಂತಹ ಅವಶ್ಯಕತೆ ಏನು ಬಂತು? ಮಾಡದೇ ಇದ್ದಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ ಹಾಗೂ ನಾನು ಕೇಳುತ್ತಿರಲಿಲ್ಲ, ಸಮಸ್ಯೆಯನ್ನು ಸುಮ್ಮನೆ ತಾವೇ ಉದ್ಭವ ಮಾಡಿಕೊಂಡಿದ್ದೀರಿ. ಏತಕ್ಕೆ ಮಾಡಬೇಕಾಗಿತ್ತು?

ಶ್ರೀ ಎ.ಬಿ. ಮಾಲಕರೆಡ್ಡಿ :- ಉತ್ತರವನ್ನೂ ಅವರೇ ಹೇಳಿದ್ದಾರೆ. ಅದನ್ನು ಸರಿಪಡಿಸಿಕೊಳ್ಳುತ್ತೇವೆ ಅಧ್ಯಕ್ಷರೇ.

ಉಡುಪಿ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಆರೋಗ್ಯ ಘಟಕಗಳು ಹಾಗೂ ಸಮುದಾಯ ಕೇಂದ್ರ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

253 (2070) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ವಿಧಾನ ಸಭಾವಾರು ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ಘಟಕ, ಸಮುದಾಯ ಕೇಂದ್ರ ಸಾರ್ವಜನಿಕ ಆಸ್ಪತ್ರೆಗಳಿವೆ;

ಆ) ಈ ಆಸ್ಪತ್ರೆಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳ ಆಸ್ಪತ್ರೆವಾರು ವಿವರ ಒದಗಿಸುವುದು;

ಇ) ಖಾಲಿಯಿರುವ ಹುದ್ದೆಗಳು ಭರ್ತಿಯಾಗದೇ ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲವೇ;

ಈ) ಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತಕ್ಷಣ ತಾತ್ಕಾಲಿಕ ನೆಲೆಯಲ್ಲಿ ತುಂಬಿಕೊಳ್ಳಲು ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಉಡುಪಿ ವಿಧಾನ ಸಭಾ ಕ್ಷೇತ್ರದಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳು 1 ಸಾರ್ವಜನಿಕ ಆಸ್ಪತ್ರೆ, ಕುಂದಾಪುರ ವಿಧಾನ ಸಭಾ ಕ್ಷೇತ್ರದಲ್ಲಿ 3 ಪ್ರಾಥಮಿಕ ಆರೋಗ್ಯ ಘಟಕ, 9 ಪ್ರಾಥಮಿಕ

ಆರೋಗ್ಯ ಕೇಂದ್ರಗಳು, ಸಾ. ಆಸ್ಪತ್ರೆ 1, ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರ 1, ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರ 1, ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ 1, ಪ್ರಾ. ಆ. ಘಟಕ, 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಕಾರ್ಕಳ ವಿಧಾನಸಭಾ ಕ್ಷೇತ್ರದಲ್ಲಿ 4 ಪ್ರಾ.ಆ. ಘಟಕಗಳು, 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 2 ಸ.ಆ. ಕೇಂದ್ರಗಳು 1, ಸಾರ್ವಜನಿಕ ಆಸ್ಪತ್ರೆ, ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ 1 ಪ್ರಾ.ಆ. ಘಟಕ, 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 1 ಸಮುದಾಯ ಆರೋಗ್ಯ ಕೇಂದ್ರಗಳಿರುತ್ತವೆ.

ಅ) ವಿವರಗಳು ಲಗತ್ತಿಸಲಾಗಿದೆ.

ಇ) ಹೌದು. ಸ್ವಲ್ಪ ಮಟ್ಟಿಗೆ.

ಈ) ಗುತ್ತಿಗೆ ಆಧಾರದ ಮೇಲೆ ಗೌರವ ಧನದ ಆಧಾರದ ಮೇಲೆ ಹಾಗೂ ನಿವೃತ್ತಿ ಸರ್ಕಾರಿ ತಜ್ಞರನ್ನು ಹಾಗೂ ಖಾಸಗಿ ಸಮಾಲೋಚಕರನ್ನು ನೇಮಿಸಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದೆ. 29 ವೃಂದಗಳಲ್ಲಿ ಸುಮಾರು 6000 ಅರೆ ವೈದ್ಯಕೀಯ ಸಿಬ್ಬಂದಿಯನ್ನು ನೇರ ನೇಮಕಾತಿ ಮೂಲಕ ತುಂಬಲು ವಿಶೇಷ ನೇರ ನೇಮಕಾತಿ ನಿಯಮಗಳನ್ನು ರಚಿಸಲಾಗಿದೆ.

STATEMENT SHOWING THE PARTICULARS OF STAFFS AT UDUPI DISTRICT & CONSTITUENCY WISE

PHC/PHU/ CHC	Medical Officer			Sr.H.A.(F)			Sr.HA (M)			BHE			Jr.HA.(M)			Jr.HA(F)			Jr. Lab Tech.			Staff Nurse			Pharm acist			Opth., Asst.			Driver			Group D		
UDUPI	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V
Manipur	1	1	-	1	1	-	1	-	1	-	-	-	4	1	3	5	4	1	1	1	-	1	1	-	1	-	1	-	-	-	-	-	-	2	1	1
Malpe	1	1	-	1	-	1	1	1	-	-	-	-	5	-	5	6	6	-	2	2	-	-	-	-	1	-	1	-	-	-	-	-	-	3	2	1
Hire Bettu	1	-	1	1	-	1	1	1	-	-	-	-	4	1	3	5	4	1	1	1	-	-	-	-	1	1	-	-	-	-	-	-	-	2	1	1
Hireyadka	2	1	1	-	-	-	1	1	-	1	-	1	4	-	4	2	2	-	1	1	-	-	-	-	1	1	-	1	1	-	2	1	1	4	2	2
Pernakila	1	1	-	1	1	-	1	-	1	1	-	1	4	-	4	6	6	-	1	-	1	1	1	-	1	1	-	-	-	-	-	-	-	3	1	2
BYNDOOR																																				
Byndoor	2	2	-	1	-	1	1	-	1	1	-	1	8	7	1	4	1	3	1	1	-	1	1	-	1	-	1	1	-	1	1	-	1	4	3	1
Sirur	1	1	-	1	1	-	1	-	1	1	-	1	3	3	-	2	2	-	1	-	1	1	1	-	1	1	-	-	-	-	-	-	-	2	2	-
Kiriman jeshwar	1	1	-	1	1	-	-	-	-	-	-	-	8	6	2	5	3	2	1	1	-	1	1	-	1	-	1	-	-	-	-	-	-	2	1	1
Maravanthe	1	1	-	1	-	1	1	-	1	1	-	1	6	6	-	3	1	2	1	-	1	1	1	-	1	1	-	-	-	-	-	-	-	2	2	-
Gangoli	1	1	-	1	-	1	1	1	-	1	-	1	7	7	-	5	2	3	1	1	-	1	1	-	1	-	1	-	-	-	-	-	-	4	2	2
Nada	2	2	-	1	-	-	1	-	1	1	-	1	5	2	3	2	2	-	1	1	-	-	-	-	1	-	1	-	-	-	-	-	-	3	2	1
Kollur	1	-	1	-	1	1	1	-	1	1	-	1	5	4	1	2	1	1	1	1	-	1	1	-	1	-	1	1	-	1	1	1	-	3	3	-
Vanlse	1	1	-	-	1	1	1	1	-	1	-	1	7	5	2	4	1	3	1	1	-	1	1	-	1	-	1	-	-	-	1	1	-	3	-	3
Hakladi	1	-	1	-	-	-	-	-	-	-	-	-	1	1	-	1	-	1	-	-	-	-	-	-	1	-	1	-	-	-	-	-	-	2	-	2
Hallihole	1	1	-	-	-	-	-	-	-	-	-	-	2	-	2	-	-	-	-	-	-	-	-	-	1	-	1	-	-	-	-	-	-	2	-	2
KAPU																																				
Kapu	1	1	1	1	1	-	1	-	1	1	-	1	9	7	2	4	-	4	1	1	-	1	1	-	1	1	-	-	-	-	-	-	-	2	2	-
Moodabettu	1	1	-	-	-	-	1	-	1	-	-	-	8	6	2	5	1	4	1	1	-	-	-	-	1	-	1	-	-	-	-	-	-	2	1	1
Padubidri	2	2	-	1	1	-	2	-	2	1	-	1	9	9	-	5	1	4	1	1	-	-	-	-	1	-	1	-	-	-	1	1	-	3	2	1
Mudurangadi	1	1	-	-	-	-	1	-	1	-	-	-	6	6	-	4	1	4	1	1	-	1	1	-	1	1	-	-	-	-	-	-	-	2	2	1
Shirva	2	1	1	1	1	-	1	-	1	-	-	-	7	6	1	5	1	4	1	1	-	3	3	-	1	-	1	-	-	-	1	1	-	6	6	-

1	2			3			4			5			6			7			8			9			10			11			12			13		
BRAHMA																																				
VARA																																				
Brahmavara	3	1	2	1	1	-	1	-	1	1	-	1	7	7	-	4	1	3	1	1	-	1	1	-	1	1	-	1	-	1	1	1	-	4	3	1
Kukkehalli	1	-	1	1	1	-	1	1	-	-	-	-	8	8	-	4	2	2	1	1	-	-	-	-	1	-	1	-	-	-	-	-	-	2	1	1
Kolalagiri	1	1	-	1	1	-	1	-	1	1	-	1	3	3	-	3	-	3	1	1	-	1	1	-	1	1	-	-	-	-	-	-	-	2	1	1
Kemmannu	1	1	-	-	-	-	1	1	-	-	-	-	9	8	1	4	-	4	1	1	-	-	-	-	1	-	1	-	-	-	-	-	-	2	2	-
Pethri	1	1	-	1	1	-	1	-	1	1	1	-	8	6	2	5	-	5	1	1	-	1	1	-	1	-	1	-	-	-	1	-	1	2	2	-
Kokkarne	1	-	1	1	-	1	1	-	1	1	-	1	6	4	2	5	-	5	1	1	-	1	1	-	1	-	1	-	-	-	-	-	-	2	2	-
Avarse	1	1	-	1	-	1	1	-	1	1	-	1	4	3	1	3	-	3	1	-	1	1	1	-	1	-	1	-	-	-	1	1	-	3	1	2
Barkuru	1	1	-	1	1	-	1	-	1	1	1	-	4	3	1	4	1	3	1	1	-	1	1	-	1	-	1	1	1	-	-	-	-	4	1	2
Saibarakattel	1	-	1	-	-	-	1	-	1	-	-	-	6	4	2	1	-	1	1	1	-	-	-	-	1	-	1	-	-	-	-	-	-	2	1	1
Sasthana	1	1	-	-	-	-	1	-	1	-	-	-	4	4	-	2	1	1	1	1	-	-	-	-	1	-	1	-	-	-	-	-	-	2	2	-
Saligram	1	1	-	-	-	-	-	-	-	-	-	-	3	3	-	3	1	2	1	1	-	1	1	-	1	1	-	-	-	-	-	-	-	3	1	2
Kota	2	2	-	1	1	-	1	1	-	1	-	1	4	4	-	2	1	1	1	1	-	-	-	-	1	1	-	1	-	1	1	1	-	3	2	1
Kodibengre	1	1	-	-	-	-	-	-	-	-	-	-	2	2	-	1	-	1	1	1	-	-	-	-	1	-	1	-	-	-	-	-	-	2	-	1
Perdoor	1	1	-	-	-	-	-	-	-	-	-	-	1	1	-	1	1	-	1	1	-	-	-	-	1	1	-	-	-	-	1	1	-	2	2	-
KARKAL																																				
Nitte	3	1	2	1	1	-	1	-	1	-	-	-	7	5	2	6	2	4	1	1	-	4	-	1	1	-	1	-	1	-	2	2	-	5	1	4
Hebbri	3	2	1	1	1	-	1	-	1	-	-	-	12	10	2	4	1	3	1	1	-	2	-	1	-	1	-	-	-	-	1	1	-	7	2	5
Ajekar	2	2	-	1	1	-	1	-	1	1	-	1	7	7	-	3	1	2	1	1	-	-	-	1	-	1	1	-	1	-	1	1	-	3	-	3
Belamnu	1	1	-	1	1	-	1	-	1	1	-	1	3	3	-	1	1	-	1	1	-	1	-	1	-	1	-	-	-	-	1	1	-	3	-	3
Palli	1	-	1	-	-	-	-	-	-	-	-	-	3	3	-	1	-	1	1	1	-	-	-	1	-	1	-	-	-	-	-	-	-	1	1	-
Hirgana	1	1	-	-	-	-	-	-	-	-	-	-	2	2	-	2	1	2	1	1	-	-	-	1	-	1	-	-	-	-	-	-	-	1	-	1
Mala	1	1	-	-	-	-	-	-	-	-	-	-	4	3	1	2	1	2	1	-	1	-	-	1	-	1	-	-	-	-	-	-	-	1	-	1

1	2			3			4			5			6			7			8			9			10			11			12			13		
Rajagoli	1	1	-	1	1	-	1	-	1	1	-	1	4	3	1	3	1	2	1	-	1	1	-	1	-	1	-	-	-	-	-	-	-	3	1	2
Benderangedil	1	1	-	1	1	-	1	-	1	1	-	1	3	2	1	2	1	1	1	-	1	1	-	1	-	1	-	-	-	-	-	-	-	2	1	2
Byloor	1	1	-	1	1	-	-	-	-	-	-	-	5	3	2	1	-	1	1	-	1	1	-	1	-	1	-	-	-	-	-	-	-	3	1	2
Sscheripete	1	1	-	1	1	-	1	1	-	-	-	-	5	5	1	2	2	-	1	1	-	1	-	1	-	1	-	-	-	-	-	-	-	3	2	1
Irvathur	1	1	-	1	1	-	1	-	1	-	-	-	7	7	1	4	2	2	1	1	-	-	-	1	-	1	-	-	-	-	-	-	-	3	2	1
Edu	1	-	1	-	-	-	-	-	-	-	-	-	-	-	-	-	-	-	1	-	1	-	-	1	-	1	-	-	-	-	-	-	-	-	-	-
Kukkanduru	1	1	-	-	-	-	-	-	-	-	-	-	2	2	-	1	-	1	-	-	-	-	-	1	-	1	-	-	-	-	-	-	-	2	1	1
Durga	1	1	-	-	-	-	-	-	-	-	-	-	2	2	-	1	-	1	-	-	-	-	-	1	1	-	-	-	-	-	-	-	-	2	2	-
Nandalike	1	1	-	-	-	-	-	-	-	-	-	-	2	2	-	-	-	-	-	-	-	-	-	1	-	1	-	-	-	-	-	-	-	3	1	2
Inna	1	1	-	-	-	-	-	-	-	-	-	-	2	1	-	-	-	-	-	-	-	-	-	1	-	1	-	-	-	-	-	-	-	1	1	-
KUNDAPUR																																				
Siddapur	3	1	2	1	-	1	1	-	1	1	-	1	9	5	4	5	2	3	1	1	-	-	-	-	1	1	-	1	-	1	1	1	-	3	3	-
Rikalkatte	2	1	1	1	1	-	1	-	1	1	-	1	7	6	1	4	2	2	1	1	-	-	-	-	1	-	1	1	1	-	1	1	-	3	3	-
Naladi	1	1	-	1	-	1	1	-	1	1	-	1	6	3	3	3	1	2	1	-	1	1	1	-	1	-	1	-	-	-	-	-	-	2	1	1
Shankara yaranaraya	1	1	-	1	1	-	1	-	1	1	-	1	3	1	2	2	-	2	1	1	-	1	1	-	1	-	1	-	-	-	-	-	-	3	2	1
Belve	1	-	1	1	1	-	1	-	1	1	-	1	5	1	4	2	1	1	1	1	-	1	1	-	1	-	1	-	-	-	1	1	-	3	2	1
Kumbasi	2	1	1	-	-	-	1	1	-	-	-	-	4	3	1	4	2	2	1	1	-	1	1	-	1	-	1	-	-	-	-	-	-	3	3	1
Basaruru	1	-	1	1	1	-	1	1	-	-	-	-	6	5	1	4	1	3	1	-	1	-	-	-	1	1	-	-	-	-	-	-	-	2	1	1
Kedur	1	1	-	1	1	-	-	-	-	-	-	-	3	3	-	1	-	1	1	-	1	-	-	-	1	-	1	-	-	-	-	-	-	1	1	-
Korgi	1	1	-	-	-	-	-	-	-	-	-	-	3	2	1	1	-	1	1	1	-	-	-	-	1	-	1	-	-	-	-	-	-	1	-	1
Kodi	1	-	1	-	-	-	-	-	-	-	-	-	3	3	-	1	1	-	-	-	-	-	-	-	1	-	1	-	-	-	-	-	-	2	1	1
Koteshwara	1	-	1	-	-	-	-	-	-	-	-	-	2	2	-	-	-	-	-	-	-	-	-	-	1	-	1	-	-	-	-	-	-	3	2	1
Kanlooru	1	1	-	-	-	-	-	-	-	-	-	-	1	-	1	-	-	-	-	-	-	-	-	-	1	-	1	-	-	-	-	-	-	2	-	2
Kundapura	9	8	1	1	1	-	1	1	-	-	-	-	2	2	-	2	2	-	2	2	-	11	10	1	1	1	-	-	-	-	2	2	-	29	14	15
NLCC Kunda pur	1	-	1	-	-	-	-	-	-	-	-	-	-	-	-	-	-	-	-	-	-	-	-	-	-	-	-	-	-	-	1	1	-	3	1	2

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ :- ಮಾನ್ಯ ಅಧ್ಯಕ್ಷರೇ, ಸಚಿವರು ಸ್ವಲ್ಪಮಟ್ಟಿಗೆ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಆದರೆ ಆರೋಗ್ಯಕ್ಕೆ ಪ್ರಥಮ ಆದ್ಯತೆ ಕೊಡಬೇಕು. ನೇರನೇಮಕಾತಿ ಮೂಲಕ ವೈದ್ಯರನ್ನು ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ. ಆದರೆ ನೇರ ನೇಮಕಾತಿಗಿರುವ ಆದೇಶವನ್ನು ಡಿಸಿಯವರಿಂದ ಇವರೇ ವಾಪಸ್ ಪಡೆದಿದ್ದಾರೆ. ವಿಶೇಷ ತಜ್ಞರನ್ನು ಮಾತ್ರ ಡಿಸಿಯವರು ನೇಮಿಸಿಕೊಳ್ಳಬಹುದೆಂದು ಡಿಸಿಯವರು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ವೈದ್ಯರ ಹುದ್ದೆಗಳನ್ನೂ ಭರ್ತಿ ಮಾಡುವ ಕೆಲಸವನ್ನು ನಾವು ಪ್ರಾರಂಭಿಸಿದ್ದೇವೆ. ಹಾಗೆ ಭರ್ತಿ ಮಾಡಿದ ಮೇಲೂ ಕೊರತೆ ಕಂಡರೆ ಆಗ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸೂಚಿಸುತ್ತೇವೆ. ಮೂರ್ನಾಲ್ಕು ದಿವಸಗಳ ಹಿಂದೆ ಸ್ವಲ್ಪ ನಿಲ್ಲಿಸಿ ಎಂದಿದ್ದೇವೆ ಕಾರಣವೇನೆಂದರೆ ನಮ್ಮಿಂದ ಆಯ್ಕೆಯಾಗಿರುವ ವೈದ್ಯರು ಇದ್ದಾರೆ, ಇವರ ಭರ್ತಿಯಾದ ಮೇಲೂ ನೋಡೋಣ ಅಂತ. ಇದು ತತ್ಕಾಲಿಕ ವ್ಯವಸ್ಥೆ. ಇನ್ನು 10-12 ದಿವಸಗಳಲ್ಲಿ ಈಗ ಆಯ್ಕೆಯಾಗಿರುವ ವೈದ್ಯರನ್ನು ನೇಮಕ ಮಾಡುತ್ತೇವೆ. ಅಂತಿಮವಾಗಿ ಏನು ಖಾಲಿ ಬೀಳುತ್ತವೆಂದು ನೋಡಿಕೊಂಡು ಜಿಲ್ಲಾಧಿಕಾರಿಗಳಿಗೆ ಸೂಚಿಸುತ್ತೇವೆ. ಅರೆಕಾಲಿಕ ವೈದ್ಯರ ಜೊತೆಗೆ ಗೌರವ ವೈದ್ಯರನ್ನೂ ಸಹ ತೆಗೆದುಕೊಳ್ಳಲು ಅವಕಾಶವಿದೆ ಅಥವಾ ಯಾರಾದರೂ ಭೇಟಿ ನೀಡಲೂ ಅವಕಾಶವಿದೆ. ಅದನ್ನು ಜಿಲ್ಲಾಧಿಕಾರಿಗೆ ಕೊಟ್ಟಿದ್ದೇವೆ. ಇನ್ನು ಪ್ಯಾರಾ ಮೆಡಿಕಲ್ ಸಿಬ್ಬಂದಿಯನ್ನು ನೇಮಕ ಮಾಡುವ ಪ್ರಕ್ರಿಯೆ ಆರಂಭವಾಗಿದ್ದು ಈಗಾಗಲೇ ಅಧಿಸೂಚನೆ ಒಂದೆರಡು ದಿವಸಗಳಲ್ಲಿ ಹೊರಡಿಸುತ್ತೇವೆ. ಇನ್ನು ಮೂರು ತಿಂಗಳಾಗಬಹುದು, ಆಗ x-ray technicians, pharmacist ಎಲ್ಲಾ ಸಿಗುತ್ತಾರೆ. ಆಗ ನೇಮಕ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಈಗ ಗುತ್ತಿಗೆ ಆಧಾರದಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ, ರೆಗ್ಯುಲರ್ ಡಾಕ್ಟರನ್ನು ಪೋಸ್ಟಿಂಗ್ಸ್ ಮಾಡಿದಾಗ ಅವರನ್ನು ಮುಂದುವರೆಸುತ್ತಿರೋ ಅಥವಾ ತೆಗೆಯುತ್ತಿರೋ? ಒಂದು ವೇಳೆ ಅವರನ್ನು ಮುಂದುವರೆಸಿದರೆ ಕೌನ್ಸಿಲಿಂಗ್‌ನಲ್ಲಿ ಏನು ವೈದ್ಯರಿಗೆ ಸ್ಥಳದ ಪ್ರೈಯಾರಿಟಿ ಕೊಡುತ್ತೀರಿ ಅದೇ ರೀತಿ ಗುತ್ತಿಗೆ ವೈದ್ಯರಿಗೂ ಅವಕಾಶ ಕೊಡುವಿರಾ?

ಶ್ರೀ ಕಾಗೋಡು ತಿಮ್ಮಪ್ಪ :- ಈಗಿರುವ ಗುತ್ತಿಗೆ ವೈದ್ಯರು ಎಲ್ಲಿದ್ದಾರೋ ಅವರನ್ನು ಅಲ್ಲೇ ಮುಂದುವರೆಸುತ್ತೇವೆ, ತೆಗೆಯುವುದಕ್ಕೆ ಹೋಗಲ್ಲ. ಈಗ 500 ಚಿಲ್ಲರೆ ವೈದ್ಯರನ್ನು ಆಯ್ಕೆ ಮಾಡಿದ್ದೇವೆ, ಅವರಿಗೆಲ್ಲಾ ಪೋಸ್ಟಿಂಗ್ಸ್ ಕೊಡುತ್ತೇವೆ. ಅವರಲ್ಲಿ ಸುಮಾರು 250 ವೈದ್ಯರನ್ನು ಈಗಾಗಲೇ ನೇಮಿಸಿ ಅವರು ಕೆಲಸ ಮಾಡುತ್ತಿದ್ದಾರೆ. ಅವರನ್ನೂ ಅಲ್ಲೇ ಮುಂದುವರೆಸುವೆವು. ಉಳಿದಿರುವ 300 ವೈದ್ಯರನ್ನು ಎಲ್ಲಿ ಖಾಲಿ ಜಾಗ ಇದೆ ಅಲ್ಲಿಗೆ ಹಾಕುತ್ತೇವೆ. ಅದಕ್ಕಾಗೇ ಕೌನ್ಸಿಲಿಂಗ್ ಮಾಡುವಾಗಲೇ ಎಲ್ಲಿ ಖಾಲಿ ಇದೆ ಮತ್ತು ಅವರು ಹೋಗಿಬರುವ ರೀತಿಯಲ್ಲೇ ಮಾಡುತ್ತೇವೆ. ಇರುವ ವ್ಯವಸ್ಥೆಯನ್ನು ಡಿಸ್ಟರ್ಬ್ ಮಾಡದೆ ಎಲ್ಲಾ ಆಸ್ಪತ್ರೆಗಳಿಗೂ ವೈದ್ಯರನ್ನು ಕಳುಹಿಸುವ ಪ್ರಯತ್ನವನ್ನು ಈಗ ಮಾಡುತ್ತಿದ್ದೇವೆ.

ಶ್ರೀ ಪಿ.ಎಚ್. ಪೂಜಾರ್ :- ಬಾಗಲಕೋಟೆ ಜಿಲ್ಲಾ ಆಸ್ಪತ್ರೆ 150 ಹಾಸಿಗೆಗಳ ಆಸ್ಪತ್ರೆ ಇತ್ತು. ಈಗಾಗಲೇ ಮುಳುಗಡೆಗೆ ಬಂದಿದೆ. ನವನಗರದಲ್ಲಿ 350 ಹಾಸಿಗೆಗಳ ಆಧುನಿಕ ಆಸ್ಪತ್ರೆ ಕೊಟ್ಟಿದ್ದೀರಿ. ಆಸ್ಪತ್ರೆಯೂ ಶಿಫ್ಟ್ ಆಗಿದೆ. 20 ಪರ್ಸೆಂಟಿನಷ್ಟು ಮಾತ್ರ ಮುಳುಗಡೆಯಾದ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ ಭಾಗದಿಂದ 8 ಕಿ.ಮೀ. ದೂರದ ಆಸ್ಪತ್ರೆಗೆ ಹೋಗಬೇಕಾಗಿದೆ.

ವಿಶೇಷವಾಗಿ ಒಪಿಡಿ ತೆಗೆಯಬೇಕು. ಆಮೇಲೆ ತಾಲೂಕು ಮಟ್ಟದಲ್ಲಿ ಮಾಡುವಂತಹ ಸಣ್ಣ ಹೆರಿಗೆ ಆಸ್ಪತ್ರೆ ಒದಗಿಸಿಕೊಟ್ಟರೆ ಅಲ್ಲಿ ಜನಕ್ಕೆ ಏನೂ ತೊಂದರೆಯಾಗುವುದಿಲ್ಲ. ಇದು ಹಳೇ ಊರಿನಲ್ಲಿ ಆಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ :- ಇದಕ್ಕೆ ಬೇರೆ ಪ್ರಶ್ನೆ ಕೇಳಬೇಕು. ಆದರೂ ಸದಸ್ಯರು ಕೇಳಿದ್ದಾರೆ, ನೋಡುತ್ತೇನೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ :- ಆರೆ ವೈದ್ಯಕೀಯ ಸಿಬ್ಬಂದಿ ಬಗ್ಗೆ ಸಚಿವರು ಹೇಳಲಿಲ್ಲ. ಎಷ್ಟೋ ಆಸ್ಪತ್ರೆಗಳಲ್ಲಿ ಸಿಬ್ಬಂದಿಯೇ ಇಲ್ಲ. ಹೀಗಾದರೆ ಆಸ್ಪತ್ರೆ ನಡೆಯುವುದು ಹೇಗೆ? ಅದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು :- ಇನ್ನು 15-20 ದಿವಸಗಳಲ್ಲಿ ನೇಮಕ ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- ಆಸ್ಪತ್ರೆ ನಡೆಯಬೇಕು. ಅದು ನಿಲ್ಲುವುದಕ್ಕಾಗುವುದಿಲ್ಲ. ಆದ್ದರಿಂದಲೇ ಕೊರತೆ ಇರುವ ಹುದ್ದೆಗಳನ್ನು ತುಂಬಲು ಅಧಿಸೂಚನೆ ಹೊರಡಿಸುತ್ತೇವೆ. ಏಕೆಂದರೆ ನಮ್ಮ ಹೊಸ ನಿಯಮಾವಳಿ ಪ್ರಕಾರ ಸಂದರ್ಶನದ ವ್ಯವಸ್ಥೆ ಇಲ್ಲ. ನೇರ ನೇಮಕಾತಿಯನ್ನು ಮೆರಿಟ್ ಮೇಲೆ ಮಾಡಬೇಕು. ನಮ್ಮ ಅಂದಾಜು ಪ್ರಕಾರ 3 ತಿಂಗಳಲ್ಲಿ ಮುಗಿಯುತ್ತದೆ. ಏಕೆಂದರೆ ಕಂಪ್ಯೂಟರೈಜೇಷನ್ ವಗೈರೆ ಮಾಡಬೇಕಾಗಿದೆ. ಈಗ 6000 ಸಿಬ್ಬಂದಿ ನೇಮಿಸುವುದಕ್ಕೆ ನೋಟಿಫಿಕೇಷನ್ ಹೊರಡಿಸುತ್ತಿದ್ದೇವೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ :- ಈ ಆಸ್ಪತ್ರೆ 100 ಹಾಸಿಗೆಯುಳ್ಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿದೆ. ಆದರೆ ಯಾವ ಸೌಲಭ್ಯಗಳಿಲ್ಲ, ಸವಲತ್ತುಗಳಿಲ್ಲ ಆದೇಶ ಮಾತ್ರವುಂಟು.

ಶ್ರೀ ಕಾಗೋಡು ತಿಮ್ಮಪ್ಪ :- ಇವರು ಸಮೂಹಿಕ ಆಸ್ಪತ್ರೆಗಳ ಬಗ್ಗೆ ಪ್ರಶ್ನೆ ಕೇಳಿರುವುದು ಒಂದೊಂದು ಆಸ್ಪತ್ರೆಗೇ ಕೇಳಿದ್ದರೆ ಉತ್ತರ ಕೊಡುತ್ತಿದ್ದೆ.

ಶ್ರೀ ಬಿ.ಆರ್. ಯಾವಗಲ್ :- ಈಗ ಜಿಲ್ಲಾಧಿಕಾರಿಗಳಿಗೆ ನೇಮಕಾತಿ ಅಧಿಕಾರ ಕೊಟ್ಟಿದ್ದೀರಿ ಸ್ಪೆಷಲಿಸ್ಟ್‌ಗಳನ್ನು ನೇಮಕ ಮಾಡುವ ಆದೇಶ ಕೊಟ್ಟಿದ್ದೀರಿ. ಆದರೆ ದಂತ ವೈದ್ಯರನ್ನು ನೇಮಿಸುವ ಅಧಿಕಾರ ಅವರಿಗಿಲ್ಲ ಆದರಿಂದಾಗಿ ತಾಲೂಕು ಮಟ್ಟದ ಸಾಮುದಾಯಿಕ ಆರೋಗ್ಯ ಕೇಂದ್ರಗಳಲ್ಲಿ ಈ ಹುದ್ದೆಗಳನ್ನು ಖಾಲಿ ಇವೆ. ಅವರನ್ನು ಯಾವ ರೀತಿ ಭರ್ತಿ ಮಾಡುತ್ತೀರಿ? ಆ ಅಧಿಕಾರವನ್ನೂ ಜಿಲ್ಲಾಧಿಕಾರಿಗಳಿಗೆ ಕೊಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ :- ಈಗಾಗಲೇ ಸುಮಾರು 80 ದಂತ ವೈದ್ಯರನ್ನು ಆಯ್ಕೆ ಮಾಡಲಾಗಿದೆ. ಅವರನ್ನು ಪೋಸ್ಟಿಂಗ್ ಮಾಡಬೇಕಾಗಿದೆ. ಎಲ್ಲೆಲ್ಲಿ ದಂತ ವೈದರ ಹುದ್ದೆಗಳು ಖಾಲಿ ಇದೆ ಅಲ್ಲಿಗೆ ಪೋಸ್ಟ್ ಮಾಡುತ್ತೇವೆ. ಅದೂ ಅಲ್ಲದೆ ಗುತ್ತಿಗೆ ಆಧಾರದ ಮೇಲೆ ದಂತ ವೈದ್ಯರನ್ನು ನೇಮಕ ಮಾಡಿಕೊಳ್ಳುವುದಕ್ಕೂ ಅವಕಾಶ ಇದೆ. ಅದನ್ನೂ ನಾವು ಮಾಡುತ್ತೇವೆ.

ಆಶ್ರಯ ಸಮಿತಿ ರಚನೆಯ ರೂಪುರೇಷೆಗಳು ಹಾಗೂ ಕಾರ್ಯವಿಧಾನಗಳು

254 (2087) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಶ್ರಯ ಸಮಿತಿಯ ರಚನೆಯ ರೂಪ ರೇಷೆಗಳೇನು; ಇದರ ಕಾರ್ಯ ವಿಧಾನಗಳೇನು;

ಆ) ಆಶ್ರಯ ಸಮತಿಯ ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ ಕರ್ತವ್ಯ ಜವಾಬ್ದಾರಿ ಕಾರ್ಯವಿಧಾನಗಳೇನು; (ವಿವರ ನೀಡುವುದು);